(ಇಂದು ದಿನಾಂಕ:09-04-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ: ಎದುರುದಾರರ ನಂ.2 ರವರ ಪರ ವಕೀಲರಿಂದ :-**

ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ.

ನಾನು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಕೆಳಕಂಡ ದಾಖಲಾತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈ ಕೆಳಕಂಡಂತೆ ನಿಶಾನೆಯಾಗಿ ಗುರುತಿಸಲಾಯಿತು.

| | |
|---|---|
| ನಿ.ಆರ್.1 | ಅಧಿಕಾರ ಪತ್ರ |
| ನಿ.ಆರ್.2 | ವಿಮಾ ಪಾಲಸಿ |

**ಪಾಟೀ ಸವಾಲುಃ ಅರ್ಜಿದಾರ ಪರ ಶ್ರೀ ಐ ಎಸ್ ಕೆ ವಕೀಲರಿಂದ**

1. ಪ್ರ.ವ.ವ ಮತ್ತು ಅಂತಿಮ ವರದಿಯಲ್ಲಿ ಎದುರುದಾರ ನಂ.1 ಇವರ ಮೇಲೆ ಆರೋಪ ಮಾಡಲಾಗಿದೆ ಎಂದರೆ ಸರಿ. ಎದುರುದಾರ ನಂ.2 ಇವರ ಲಾರಿಗೆ ನಮ್ಮ ಕಂಪನಿಯ ವಿಮೆ ಚಾಲ್ತಿಯಲ್ಲಿತ್ತು ಎಂದರೆ, ಶರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಚಾಲ್ತಿಯಲ್ಲಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಎದುರುದಾರ ನಂ.1 ಇವರಿಗೆ ವಾಹನ ಚಾಲನಾ ಪರವಾನಿಗೆ ಇತ್ತು ಎಂದರೆ ಸರಿಯಲ್ಲ. ಅಪಘಾತದ ದಿನದಂದು ವಾಹನದ ಎಫ್ ಸಿ ಮತ್ತು ಪರ್ಮಿಟ ಚಾಲ್ತಿಯಲ್ಲಿತ್ತು ಎಂದರೆ ಸರಿಯಲ್ಲ. ವಾಹನದ ಎಫ್ ಸಿ ಮತ್ತು ಪರ್ಮಿಟ ಚಾಲ್ತಿಯಲ್ಲಿ ಇರಲಿಲ್ಲ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಪರಿಹಾರ ಕೊಡಬೇಕಾಗುತ್ತದೆ ಎಂದು ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಂತಿಮ ವರದಿಯನ್ನು ನಾನು ಪ್ರಶ್ನಿಸಿಲ್ಲ ಎಂದರೆ ಸರಿ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು